# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

**ಸಿ.ಸಿ. ನಂ. 463/2018**

ಸಿಡಬ್ಲ್ಯೂ-1 ಪಿಡಬ್ಲ್ಯೂ- 1

| | | |
|---|---|---|
| ಹೆಸರು | : | ಶ್ರೀ ಪೃತ್ವಿರಾಜ |
| ತಂದೆಯ ಹೆಸರು | : | ಕರಣಪ್ರಸಾದ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಪಿ.ಎಸ್.ಐ. ಕೊಂಚಾವರಮ್ |
| ವಾಸ ಸ್ಥಳ | : | ಕೊಂಚಾವರಮ್ |

---

ದಿನಾಂಕ 11.10.2022

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2016 ರಿಂದ 2020 ರವರೆಗೆ ಸೇಡಂ ಪೋಲಿಸ್ ಠಾಣೆಯಲ್ಲಿ ಎ.ಎಸ್.ಐ. ಅಂತಾ ಸೇವೆ ಸಲ್ಲಿಸಿರುತ್ತೇನೆ. ಈ ಅವಧಿಯಲ್ಲಿ ನಾನು ದಿನಾಂಕ 06.04.2018 ರಂದು ಠಾಣಾ ಕರ್ತವ್ಯದಲ್ಲಿ ಇದ್ದಾಗ ಸೇಡಂ ಪಟ್ಟಣದ ದೊಡ್ಡ ಅಗಸಿ ಏರಿಯಾದಲ್ಲಿ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾರೆ ಅಂತಾ ಖಚಿತ ಮಾಹಿತಿ ಬಂದಿದ್ದು 02.30 ಗಂಟೆಗೆ ನಮ್ಮ ಸಿಬ್ಬಂದಿಯವರಾದ ವಿಠಲರೆಡ್ಡಿ, ಸುನೀಲಕುಮಾರ ಸಿಪಿಸಿ 1040, ಗೀತಾ ಮಹಿಳಾ ಪಿಸಿ, ಅನಿತಾ ಮಹಿಳಾ ಹೆಚ್.ಜಿ ಇವರನ್ನು ಮತ್ತು ಪಂಚರಾದ ಚಾಸಾ-2 ಮತ್ತು 3 ಇವರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ಒಂದು ಖಾಸಗಿ ವಾಹನದಲ್ಲಿ ಹೋಗಿದ್ದು ಆಗ ದೊಡ್ಡ ಅಗಸಿ ಏರಿಯಾದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಇಬ್ಬರೂ ಹೆಣ್ಣು ಮಕ್ಕಳು ಸಾರ್ವಜನಿಕರಿಗೆ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದರು ಆಗ ಸಿಬ್ಬಂದಿ ಜನರು ಮತ್ತು ಪಂಚರ ಸಹಾಯದೊಂದಿಗೆ ದಾಳಿ ಮಾಡಿದ್ದು ಆ ಇಬ್ಬರೂ ಹೆಣ್ಣು ಮಕ್ಕಳನ್ನು ಹಿಡಿದು ಅವರ ಹೆಸರು ವಿಳಾಸ ವಿಚಾರಿಸಿದ್ದು ಅವರ ಹತ್ತಿರ 25 ಸೇಂದಿ ಪಾಕೇಟುಗಳು ಇದ್ದವು ಮತ್ತು ಅವುಗಳನ್ನು ಅಕ್ರಮ ಲಾಭಕ್ಕಾಗಿ ಅವರು ಮಾರಾಟ ಮಾಡುತ್ತಿದಿದ್ದು ಕಂಡುಬಂದಿರುತ್ತದೆ. ಆಗ ನಾನು ಸಿಕ್ಕ ಸೇಂದಿ ಪಾಕೇಟಗಳಿಂದ ಒಂದು ಸೇಂದಿ ಪಾಕೇಟನ್ನು ಜಪ್ತಿ ಮಾಡಿ ಉಳಿದ 24 ಸೇಂದಿ ಪಾಕೇಟುಗಳನ್ನು ನನ್ನ ತಾಬಾಕ್ಕೆ ತೆಗೆದುಕೊಂಡು ಘಟನಾ ಸ್ಥಳದಲ್ಲಿಯೇ ಮದಾಹ್ನ 03.00 ರಿಂದ 04.00 ಗಂಟೆಯವರೆಗೆ ಪಂಚನಾಮೆ ಬರೆದು ಮುಗಿಸಿ ಸಿಕ್ಕ ಮಾಲುಗಳು ಮತ್ತು ಆರೋಪಿತರನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಠಾಣಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತೇನೆ. ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು.ಮಾ.ನ್ನು ಗುರುತಿಸುತ್ತೇನೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿತರ ಪರ ವಕೀಲರಿಂದ**

ದೊಡ್ಡ ಅಗಸಿಯ ಸುತ್ತ-ಮುತ್ತ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಆರೋಪಿತರು ಕೈ ಮಾಡಿ ಸಾರ್ವಜನಿಕರನ್ನು ಕರೆಯುತ್ತಿದ್ದರು ಎಂದು ನಾನು ಹೇಳಿದ್ದು, ಹಾಗೇ ಯಾರನ್ನು ಕರೆಯುತ್ತಿದ್ದರು ಎಂದರೆ ಸಾಕ್ಷಿ ಇಬ್ಬರೂ ಆರೋಪಿತರು ಸಮಾನ ಉದ್ದೇಶ ಇಟ್ಟುಕೊಂಡು ಸಾರ್ವಜನಿಕರನ್ನು ಕರೆಯುತ್ತಿದ್ದರು ಎಂದು ನುಡಿಯುತ್ತಾರೆ. 25 ಸೇಂದಿ ಪಾಕೇಟುಗಳು ಯಾರ ವಶದಲ್ಲಿ ಇದ್ದವು ಎಂದು ಪಂಚನಾಮೆಯಲ್ಲಿ ಕಾಣಿಸಿರುತ್ತಿರಾ ಎಂದರೆ ಸಾಕ್ಷಿ ಇಬ್ಬರ ವಶದಲ್ಲಿ ಇದ್ದವು ಎಂದು ಬರೆದಿರುತ್ತೇವೆ ಎಂದು ನುಡಿಯುತ್ತಾರೆ. ಈ ರೀತಿಯಾಗಿ ನಾನು ಪಂಚನಾಮೆಯಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ದೊಡ್ಡ ಅಗಸಿಯ ಹತ್ತಿರ ಇರುವ ಹಳ್ಳದಲ್ಲಿ ಜನರು ಇರುತ್ತಾರೆ. ನಾವು ಆರೋಪಿತರನ್ನು ಹಿಡಿದಾಗ ಸಾರ್ವಜನಿಕರು ಹಾಜರು ಇರಲಿಲ್ಲ. ಆರೋಪಿತರ ಹತ್ತಿರ ಸೇಂದಿ ಪಾಕೇಟುಗಳನ್ನು ಎಲ್ಲಿಂದ ತಂದಿರುತ್ತಿರಿ ಎಂದು ವಿಚಾರ ಮಾಡಿಲ್ಲ. ಆರೋಪಿತರನ್ನು ನಾವು ರೆಡ್ ಮಾಡಿ ಹಿಡಿದಾಗ ಅವರು ಸೇಂದಿ ಪಾಕೇಟುಗಳನ್ನು ಮಾರಾಟ ಮಾಡುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ ಎಂದು ನನ್ನ ಮುಂದೆ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಫ್.ಎಸ್.ಎಲ್. ವರದಿ ಸೇಂದಿ ಪಡೆದುಕೊಂಡಿದ್ದಾಗ ಪಂಚರ ಹೆಸರು ಬರೆದಿಲ್ಲ ಆದರೆ ಸಹಿ ಪಡೆದುಕೊಂಡಿರುತ್ತೇನೆ. ದಿನಾಂಕ 06.04.2018 ರಂದು ನಾನು ಮತ್ತು ಸಿಬ್ಬಂದಿಯವರು ಮತ್ತು ಪಂಚ ಜನರು ಕೂಡಿಕೊಂಡು ದೊಡ್ಡ ಅಗಸಿ ಗಿರಣಿಯ ಪಕ್ಕ ರೆಡಗೆಂದು ಹೋಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಸೇಡಂ ರಹವಾಸಿ ಅಲ್ಲ ಎಂದರೆ ಸರಿಯಲ್ಲ. ಆರೋಪಿತರ ಸ್ವಾದಿನದಿಂದ 25 ಸೇಂದಿ ಪಾಕೇಟುಗಳನ್ನು ಜಪ್ತುಪಡಿಸಿಕೊಂಡಿರುವುದಾಗಿ ಮತ್ತು ಅದರಲ್ಲಿಂದ 1 ಸೇಂದಿಪಾಕೇಟನ್ನು ಪಂಚರ ಸಮಕ್ಷಮ ರಾಸಾಯನಿಕ ಪರೀಕ್ಷೆ ಸಲುವಾಗಿ ಪಡೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವಾಗ ಸಾರ್ವಜನಿಕರ ಹೇಳಿಕೆ ಪಡೆದುಕೊಂಡಿಲ್ಲ. 1 ಲೀ.ನ ಎಮ್ಟಿ ಬಾಟಲಿಗಳು ಸಾಕಷ್ಟು ದೊರೆಯುತ್ತವೆ ಎಂದರೆ ಸರಿ. ನಾನು 03.00 ಗಂಟೆಯಿಂದ 04.00 ಗಂಟೆಯವರೆಗೆ ಘಟನಾ ಸ್ಥಳದಲ್ಲಿ ಪಂಚನಾಮೆ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಯವರು ಪ್ರತಿ ತಿಂಗಳು ನಮ್ಮ ಠಾಣೆಯ ಕ್ರೈಮ ರೆಟಗಳನ್ನು ಪರಿಶೀಲಿಸುತ್ತಾರೆ ಎಂದರೆ ಸರಿ. ನಾನು ಹೇಳುವಂತೆ ಯಾವುದೇ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ಇಲಾಖೆಯ ಅಂಕಿಸಂಖ್ಯೆಗಳನ್ನು ಹೆಚ್ಚಿಗೆ ತೋರಿಸುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH